

بسم اللهِ الرّحمٰن الرّحیم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **26–08–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಆಕ್ರಮಣ ನಡೆಸುವ ವಿರೋಧಿಗಳನ್ನು ತಡೆಯಲು ಹಝ್ರತ್ ಅಬೂಬಕರ್(ರ) ಸಿರಿಯದ ಕಡೆ ಕಳುಹಿಸಿದ ಸೈನ್ಯಗಳ ಪ್ರಸ್ತಾಪ ನಡೆಯುತ್ತಿತ್ತು. ಮೂರರ ಪ್ರಸ್ತಾಪ ಕಳೆದ ಖುತ್ಬದಲ್ಲಿ ನಡೆಸಿದ್ದೆ. ನಾಲ್ಕನೇ ಸೇನೆ ಹಝ್ರತ್ ಅಮ್ರ್ ಬಿನ್ ಆಸ್(ರ)ರದ್ದಾಗಿತ್ತು. ಅದರ ಬಗ್ಗೆ ಹೀಗೆ ಬರೆಯಲಾಗಿದೆ: ಹಝ್ರತ್ ಅಬೂಬಕರ್(ರ) ನಾಲ್ಕನೇ ಸೇನೆಯನ್ನು ಸಿರಿಯದ ಕಡೆಗೆ ಹಝ್ರತ್ ಅಮ್ರ್ ಬಿನ್ ಆಸ್(ರ)ರ ನಾಯಕತ್ವದಲ್ಲಿ ಕಳುಹಿಸಿದರು. ಸಿರಿಯಗೆ ಹೋಗುವುದಕ್ಕೆ ಮುಂಚೆ ಖುಝಾಅ ಗೋತ್ರದ ಒಂದು ಭಾಗದ ಸದಖಗಳನ್ನು ವಸೂಲು ಮಾಡಲಿಕ್ಕಾಗಿ ಹಝ್ರತ್ ಅಮ್ರ್ ಬಿನ್ ಆಸ್(ರ)ರನ್ನು ನೇಮಿಸಲಾಗಿತ್ತು. ಸಿರಿಯಕ್ಕೆ ಕಳುಹಿಸುವ ತೀರ್ಮಾನ ಆದಾಗ ಅವರನ್ನು ಮದೀನಕ್ಕೆ ಕರೆಯಲಾಯಿತು. ಜನರು ಅವರ ಬಳಿಗೆ ಬಂದು ಒಟ್ಟು ಸೇರಲಿಕ್ಕಾಗಿ ಮದೀನದ ಹೊರಗೆ ಶಿಬಿರ ಹೂಡಲು ಆದೇಶಿಸಲಾಯಿತು. ಹಝ್ರತ್ ಅಮ್ರ್ ಬಿನ್ ಆಸ್(ರ) ಹೊರಡಲು ತಯಾರಾದಾಗ ಹಝ್ರತ್ ಅಬೂಬಕರ್(ರ) ಅವರಿಗೆ ವಿದಾಯ ಹೇಳಲು ಹೊರಟರು ಮತ್ತು ನಿರ್ದೇಶನಗಳನ್ನು ಕೊಟ್ಟರು. ಹಝ್ರತ್ ಅಮ್ರ್ ಬಿನ್ ಆಸ್(ರ) ಹೇಳಿದರು: ನನ್ನ ಬಗ್ಗೆ ನಿಮ್ಮ ಭಾವನೆಯನ್ನು ನಾನು ಸತ್ಯಪಡಿಸಿ ತೋರಿಸಿದರೆ ಮತ್ತು ನಿಮಗೆ ನನ್ನ ಬಗ್ಗೆ ಇರುವ ಅಭಿಪ್ರಾಯ ತಪ್ಪಾಗದೇ ಇರುವುದಾದರೆ ಎಷ್ಟು ಚೆನ್ನ.

ಹಝ್ರತ್ ಅಮ್ರ್ ಬಿನ್ ಆಸ್(ರ)ರ ಸೇನೆಯಲ್ಲಿ ಆರೇಳು ಸಾವಿರ ಸೈನಿಕರಿದ್ದರು. ಅವರು ಹೋಗಲು ಉದ್ದೇಶಿಸಿದ್ದ ಸ್ಥಳ ಪೆಲಸ್ತೀನ್ ಆಗಿತ್ತು. ಅವರು ಒಂದು ಸಾವಿರ ಯೋಧರನ್ನು ಒಳಗೊಂಡ ಸೇನೆಯನ್ನು ತಯಾರು ಮಾಡಿ ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್(ರ)ರ ನಾಯಕತ್ವದಲ್ಲಿ ರೋಮಿನ ಕಡೆಗೆ ಕಳುಹಿಸಿದರು. ಈ ತಂಡ ರೋಮನರೊಡನೆ ಮುಖಾಮುಖಿಯಾಯಿತು ಮತ್ತು ಶತ್ರುಗಳ ಶಕ್ತಿಯನ್ನು ಚೂರಾಗಿಸಿ ಅವರ ಮೇಲೆ ವಿಜಯ ಸಾಧಿಸಿತು ಮತ್ತು ಕೆಲವು ಬಂಧಿಗಳೊಂದಿಗೆ ಮರಳಿ ಬಂತು. ರೋಮಿನ ಸೈನ್ಯ ರವೀಸಿನ ನೇತೃತ್ವದಲ್ಲಿ ಮುಸ್ಲಿಮರ ಮೇಲೆ ಅಚಾನಕ್ಕಾಗಿ ದಾಳಿ ನಡೆಸಲು ತಯಾರಿ ಮಾಡುತ್ತಿದೆ ಎಂದು ಈ ಬಂಧಿಗಳನ್ನು ವಿಚಾರಿಸಿದಾಗ ಹಝ್ರತ್ ಅಮ್ರ್ ಬಿನ್ ಆಸ್(ರ)ರಿಗೆ ತಿಳಿದುಬಂತು. ಈ ಮಾಹಿತಿಯ ಬೆಳಕಿನಲ್ಲಿ ಅವರು ತನ್ನ ಸೇನೆಯನ್ನು ಕ್ರಮಪಡಿಸಿದರು. ರೋಮನರು ದಾಳಿ ನಡೆಸಿದಾಗ ಅವರ ದಾಳಿಯನ್ನು ತಡೆಯುವಲ್ಲಿ ಮುಸ್ಲಿಮರು ಸಫಲರಾದರು ಮತ್ತು ಶತ್ರುಗಳು ಮರಳಿ ಹೋಗುವಂತಾಯಿತು. ಅನಂತರ ಅವರ ಮೇಲೆ ಮರುದಾಳಿ ನಡೆಸಿ ಶತ್ರುಗಳ ಶಕ್ತಿಯನ್ನು ನಾಶಪಡಿಸಿ ಅವರನ್ನು ಪರಾರಿಯಾಗುವಂತೆ ಮತ್ತು ಯುದ್ದ ಮೈದಾನವನ್ನು ಬಿಟ್ಟು ಓಡಿಹೋಗುವಂತೆ ಮಾಡಿದರು. ಇಸ್ಲಾಮಿನ ಸೇನೆ ಅವರನ್ನು ಹಿಂಬಾಲಿಸಿದರು ಮತ್ತು ಸಾವಿರಾರು ರೋಮನ್ ಸೈನಿಕರು ವಧಿಸಿಲ್ಪಟ್ಟರು. ಇದರೊಂದಿಗೆ ಈ ಯುದ್ಧ ಕೊನೆಗೊಂಡಿತು.

ರೋಮಿನ ಅರಸನಾದ ಹಿರ್ಕಲ್ ಆ ದಿನಗಳಲ್ಲಿ ಪೆಲಸ್ತೀನಿನಲ್ಲಿದ್ದನು. ಮುಸ್ಲಿಮರ ತಯಾರಿಯ ಸುದ್ದಿ ಅವನಿಗೆ ಮುಟ್ಟಿದಾಗ ಅವನು ಪ್ರಾದೇಶಿಕ ಸರದಾರರನ್ನು ಒಟ್ಟುಗೂಡಿಸಿದನು. ಅವರ ಮುಂದೆ ಆವೇಶಭರಿತ ಭಾಷಣಗಳನ್ನು ಮಾಡಿ ಅವರನ್ನು ಮುಸ್ಲಿಮರ ವಿರುದ್ಧ ಯುದ್ಧ ಮಾಡಲು ಹುರಿದುಂಬಿಸಿದನು. ಪೆಲಸ್ತೀನಿನ ಜನರನ್ನು ಮುಸ್ಲಿಮರ ವಿರುದ್ಧ ಹುರಿದುಂಬಿಸಿ ಅವನು ಡಮಸ್ಕಸಿಗೆ ಹೋದನು. ಅಲ್ಲಿಂದ ಹಿಮಸ್ ಮತ್ತು ಅಂತಾಕಿಯಗೆ ತಲುಪಿದನು. ಪೆಲಸ್ತೀನನಲ್ಲಿ ಮಾಡಿದಂತೆ ಆ ಪ್ರದೇಶಗಳಲ್ಲೂ ಆವೇಶದ ಭಾಷಣಗಳನ್ನು ಮಾಡಿ ಅಲ್ಲಿಯ ಜನರನ್ನು ಮುಸ್ಲಿಮರ ವಿರುದ್ಧ ಯುದ್ಧ ಮಾಡಲು ಹುರಿದುಂಬಿಸಿದನು. ಅಂತಾಕಿಯವನ್ನು ಸ್ವತಃ ಕೇಂದ್ರವಾಗಿರಿಸಿಕೊಂಡು ಮುಸ್ಲಿಮರ ವಿರುದ್ಧ ತಯಾರಿಗಳನ್ನು ಆರಂಭಿಸಿದನು. ಹಿರ್ಕಲಿನ ಬಳಿ ಬಹಳಷ್ಟು ಸೈನಿಕರಿದ್ದರು. ಮುಸ್ಲಿಮರ ಸೇನೆಯ ಪ್ರತಿಯೊಂದು ಭಾಗವನ್ನು ಎದುರಿಸುವ ಮೂಲಕ ಅವರನ್ನು ದುರ್ಬಲಗೊಳಿಸಲಿಕ್ಕಾಗಿ ಮುಸ್ಲಿಮರ ಪ್ರತಿಯೊಂದು ಸೇನೆಯ ಎದುರಾಗಿ ಬೇರೆ ಬೇರೆ ಸೇನೆಯನ್ನು ಕಳುಹಿಸಲು ಅವನು ತೀರ್ಮಾನಿಸಿದನು.

ಹಿರ್ಕಲ್ ಅಂತಾಕಿಯದಲ್ಲಿದ್ದಾನೆ ಮತ್ತು ನಿಮಗಿಂತ ಮುಂಚಿನ ಯಾವುದೇ ಸಮುದಾಯವನ್ನು ಎದುರಿಸಲು ಅವನ ತಂದೆ ತಾತಂದಿರಲ್ಲಿ ಯಾರೂ ಕೂಡ ತಯಾರು ಮಾಡಿರದಷ್ಟು ದೊಡ್ಡ ಸೇನೆಯನ್ನು ಅವನು ನಿಮ್ಮನ್ನು ಎದುರಿಸಲು ತಯಾರು ಮಾಡಿರುವನು ಎಂಬ ಸುದ್ದಿಯನ್ನು ಒಬ್ಬ ವ್ಯಕ್ತಿಯು ಜಾಬಿಯದಲ್ಲಿದ್ದ ಹಝ್ರತ್ ಅಬೂ ಉಬೈದ ಬಿನ್ ಜರ್‍ರಾಹ್(ರ)ರಿಗೆ ಮುಟ್ಟಿಸಿದರು. ಆಗ ಅವರು ರೋಮಿನ ಅರಸನಾದ ಹಿರ್ಕಲಿನ ಉದ್ದೇಶಗಳ ಬಗ್ಗೆ ಪತ್ರದ ಮೂಲಕ ಹಝ್ರತ್ ಅಬೂಬಕರ್(ರ)ರಿಗೆ ತಿಳಿಸಿದರು. ಹಝ್ರತ್ ಅಬೂಬಕರ್(ರ) ಅದಕ್ಕೆ ಉತ್ತರವಾಗಿ ಹೀಗೆ ಪತ್ರ ಬರೆದರು: ಅಂತಾಕಿಯದಲ್ಲಿ ಅವನು ತಂಗಿರುವುದು ಅವನ ಮತ್ತು ಅವನ ಜೊತೆಗಾರರ ಸೋಲಿಗೆ ಹಾಗೂ ಮುಸ್ಲಿಮರ ವಿಜಯಕ್ಕೆ ಇರುವ ಮುನ್ನುಡಿಯಾಗಿದೆ.

ಹಝ್ರತ್ ಅಮ್ರ್ ಬಿನ್ ಆಸ್(ರ) ಕೂಡ ಹಝ್ರತ್ ಅಬೂಬಕರ್(ರ)ರಿಗೆ ಪತ್ರ ಬರೆದರು. ಹಝ್ರತ್ ಅಬೂಬಕರ್(ರ) ಅದಕ್ಕೆ ಉತ್ತರಿಸುತ್ತಾ ಹೀಗೆ ಬರೆದರು: ರೋಮನರ ಸೈನಿಕರು ಒಟ್ಟುಗೂಡಿರುವ ಬಗ್ಗೆ ಪ್ರಸ್ತಾಪಿಸಲಾದ ನಿಮ್ಮ ಪತ್ರ ನನಗೆ ಲಭಿಸಿದೆ. ನೆನಪಿಡಿರಿ, ಅಲ್ಲಾಹನು ತನ್ನ ಪ್ರವಾದಿ(ಸ)ರೊಂದಿಗೆ ನಮಗೆ ವಿಜಯ ಮತ್ತು ಸಹಾಯ ದಯಪಾಲಿಸಿದ್ದು ಸೈನಿಕರ ಆಧಿಕ್ಯದ ಕಾರಣದಿಂದಾಗಿರಲಿಲ್ಲ. ಆಗ ನಮ್ಮ ಸ್ಥಿತಿ ಏನಾಗಿತ್ತು ಎಂದರೆ, ನಾವು ಅವರ ಜೊತೆ ಯುದ್ಧ ಮಾಡುತ್ತಿದ್ದಾಗ ನಮ್ಮ ಬಳಿ ಕೇವಲ ಎರಡು ಕುದುರೆಗಳು ಇದ್ದುವು ಮತ್ತು ಒಂಟೆಗಳ ಮೇಲೂ ಸರದಿ ಪ್ರಕಾರ ಸವಾರರಾಗುತ್ತಿದ್ದೆವು. ಆದಾಗ್ಯೂ ಅಲ್ಲಾಹನು ನಮಗೆ ಶತ್ರುಗಳ ಮೇಲೆ ವಿಜಯ ದಯಪಾಲಿಸುತ್ತಿದ್ದನು ಮತ್ತು ನಮಗೆ ನೆರವು ನೀಡುತ್ತಿದ್ದನು.

ಹಝ್ರತ್ ಯಝೀದ್ ಬಿನ್ ಅಬೂಸುಫ್ಯಾನ್(ರ) ಕೂಡ ಅಲ್ಲಿಯ ಪರಿಸ್ಥಿತಿಗಳ ಬಗ್ಗೆ ಬರೆದು ಹಝ್ರತ್ ಅಬೂಬಕರ್(ರ)ರಿಂದ ಸಹಾಯವನ್ನು ಬೇಡಿದರು. ಅದಕ್ಕೆ ಉತ್ತರವಾಗಿ ಹಝ್ರತ್ ಅಬೂಬಕರ್(ರ) ಹೀಗೆ ಬರೆದರು: ಶತ್ರುಗಳೊಡನೆ ನಿಮ್ಮ ಮುಖಾಮುಖಿಯಾದರೆ, ನಿಮ್ಮ ಸಂಗಡಿಗರನ್ನು ಜೊತೆಗೆ ಸೇರಿಸಿ ಅವರ ಮೇಲೆ ದಾಳಿ ನಡೆಸಿರಿ ಮತ್ತು ಯುದ್ಧ ಮಾಡಿರಿ. ಅಲ್ಲಾಹನು ನಿಮ್ಮನ್ನು ಅಪಮಾನಿತಗೊಳಿಸಲಾರನು. ಅಲ್ಲಾಹನ ಆದೇಶ ಪ್ರಕಾರ ಸಣ್ಣ ಗುಂಪು ದೊಡ್ಡ ಗುಂಪಿನ ಮೇಲೆ ವಿಜಯ ಸಾಧಿಸುವುದು ಎಂದು ಅಲ್ಲಾಹನು ನಮಗೆ ತಿಳಿಸಿರುವನು. ಆದಾಗ್ಯೂ ನಿಮಗೆ ಸಾಕಾಗುವಷ್ಟು ಯೋಧರನ್ನು ನಾನು ನಿಮ್ಮ ಸಹಾಯಕ್ಕಾಗಿ ಕಳುಹಿಸುತ್ತಾ ಇದ್ದೇನೆ ಮತ್ತು ಹೆಚ್ಚಿನ ಆವಶ್ಯಕತೆ ಇರದು.

ಇಸ್ಲಾಮಿನ ಸೈನಿಕರ ಸಹಾಯಕ್ಕಾಗಿ ಸಿರಿಯಗೆ ಹೋಗಲು ಆದೇಶ ನೀಡುತ್ತಾ ಹಝ್ರತ್ ಹಾಶಿಂ ಬಿನ್ ಉತ್ಬ(ರ)ರೊಡನೆ ಹಝ್ರತ್ ಅಬೂಬಕರ್(ರ) ಹೀಗೆ ಹೇಳಿದರು: ಮುಸ್ಲಿಮರು ನನಗೆ ಪತ್ರ ಬರೆದು ಸತ್ಯನಿಷೇಧಿಗಳಾದ ಶತ್ರುಗಳನ್ನು ಎದುರಿಸಲಿಕ್ಕಾಗಿ ಸಹಾಯವನ್ನು ಬೇಡಿರುವರು. ಆದ್ದರಿಂದ ನೀವು ನಿಮ್ಮ ಸಂಗಡಿಗರನ್ನು ಜೊತೆಗೆ ಸೇರಿಸಿಕೊಂಡು ಅವರ ಬಳಿಗೆ ಹೋಗಿರಿ. ನಿಮ್ಮ ಜೊತೆಗೆ ಹೋಗಲಿಕ್ಕಾಗಿ ನಾನು ಜನರನ್ನು ತಯಾರು ಮಾಡುತ್ತಿದ್ದೇನೆ. ನೀವು ಇಲ್ಲಿಂದ ಹೊರಟು ಹಝ್ರತ್ ಅಬೂ ಉಬೈದ(ರ)ರನ್ನು ಭೇಟಿಯಾಗಿರಿ.

ಹಝ್ರತ್ ಸಈದ್ ಬಿನ್ ಆಮಿರ್ ಬಿನ್ ಹದೀಮ್(ರ)ರನ್ನು ಯುದ್ಧ ಮಾಡಲಿಕ್ಕಾಗಿ ಸಿರಿಯಗೆ ಕಳುಹಿಸಲು ಹಝ್ರತ್ ಅಬೂಬಕರ್(ರ) ಬಯಸಿದರು. ಅವರು ಹಝ್ರತ್ ಅಬೂಬಕರ್(ರ)ರ ಬಳಿಗೆ ಬಂದು ಮತ್ತು ಸಿರಿಯದ ಕಾರ್ಯಾಚರಣೆಯ ಬಗ್ಗೆ ತನ್ನ ಕೋರಿಕೆಗಳನ್ನು ಮುಂದಿರಿಸಿದರು ಮತ್ತು ಯುದ್ಧ ಮಾಡಲು ಇರುವ ತನ್ನ ಅಭಿಲಾಷೆಯನ್ನು ವ್ಯಕ್ತಪಡಿಸಿಕೊಂಡರು. ಆಗ ಹಝ್ರತ್ ಅಬೂಬಕರ್(ರ) ತಯಾರಾಗಲು ಆದೇಶ ನೀಡುತ್ತಾ ಹೀಗೆ ಹೇಳಿದರು: ನಾನು ಸಿರಿಯದ ಕಡೆಗೆ ಒಂದು ಸೇನೆಯನ್ನು ಕಳುಹಿಸುವೆನು ಮತ್ತು ನಿಮ್ಮನ್ನು ಅದರ ಸೇನಾಧಿಪತಿಯನ್ನಾಗಿ ಮಾಡುವೆನು. ಅನಂತರ ಹಝ್ರತ್ ಬಿಲಾಲ್(ರ)ರೊಡನೆ ಇದರ ಬಗ್ಗೆ ಜನರ ಮಧ್ಯೆ ಘೋಷಿಸಲು ಹಝ್ರತ್ ಅಬೂಬಕರ್(ರ) ಹೇಳಿದರು.

ಹಝ್ರತ್ ಸಈದ್(ರ) ಹೊರಡಲು ತಯಾರಾದಾಗ ಹಝ್ರತ್ ಅಬೂಬಕರ್(ರ)ರ ಸನ್ನಿಧಿಯಲ್ಲಿ ಹಝ್ರತ್ ಬಿಲಾಲ್(ರ) ಹಾಜರಾಗಿ ಹೀಗೆ ಹೇಳಿದರು: ನನ್ನ ಪ್ರಭುವಿನ ಮಾರ್ಗದಲ್ಲಿ ಯುದ್ಧ ಮಾಡಲು ನನಗೆ ನೀವು ಅನುಮತಿ ನೀಡಿರಿ. ಕುಳಿತುಕೊಳ್ಳುವುದಕ್ಕಿಂತ ನನಗೆ ಯುದ್ಧ ಮಾಡುವುದು ಹೆಚ್ಚು ಪ್ರಿಯ. ಆಗ ಹಝ್ರತ್ ಅಬೂಬಕರ್(ರ) ಹೀಗೆ ಹೇಳಿದರು: ನಿಮ್ಮ ಆಸೆ ಜಿಹಾದ್ ಮಾಡುವುದಾಗಿದ್ದರೆ, ಇಲ್ಲೇ ತಂಗಿರಲು ನಾನು ನಿಮಗೆ ಎಂದಿಗೂ ಆದೇಶ ನೀಡಲಾರೆನು. ಅಧಾನ್ ನೀಡಲಿಕ್ಕಾಗಿ ಮಾತ್ರ ನಾನು ನಿಮ್ಮನ್ನು ಬಯಸುತ್ತೇನೆ. ಹೇ ಬಿಲಾಲ್, ನಿಮ್ಮ ಅಗಲುವಿಕೆಯಿಂದ ನನಗೆ ಭಯದ ಅನುಭವ ಉಂಟಾಗುತ್ತದೆ. ಆದರೆ ಖಿಯಾಮತ್ ತನಕ ಭೇಟಿಯಾಗದ ಒಂದು ಅಗಲುವಿಕೆಯಿದೆ. ಅದು ಅನಿವಾರ್ಯ. ಎಲೈ ಬಿಲಾಲ್, ನೀವು ಸತ್ಕರ್ಮ ಮಾಡುತ್ತಾ ಹೋಗಿರಿ, ನೀವು ಈ ಲೋಕವನ್ನು ಬಿಟ್ಟು ಹೋಗುವಾಗ ಇದು ನಿಮ್ಮ ಯಾತ್ರಾ ಸಾಮಾನಾಗುವುದು. ನೀವು ಜೀವಂತರಾಗಿರುವ ತನಕ ಇದು ನಿಮ್ಮ ನೆನಪನ್ನು ಉಳಿಸುವುದು. ನೀವು ನಿಧನರಾದರೆ, ಅದರ ಅತ್ಯುತ್ತಮ ಪ್ರತಿಫಲ ನಿಮಗೆ ಸಿಗುವುದು. ಹಝ್ರತ್ ಬಿಲಾಲ್(ರ) ಹೇಳಿದರು: ನಾನು ಹಝ್ರತ್ ಪೈಗಂಬರ್(ಸ)ರ ನಂತರ ಬೇರೆ ಯಾರಿಗಾಗಿಯೂ ಅಧಾನ್ ನೀಡಲು ಬಯಸುವುದಿಲ್ಲ. ಅನಂತರ ಅವರು ಹಝ್ರತ್ ಸಈದ್ ಬಿನ್ ಆಮಿರ್ ಬಿನ್ ಹದೀಮ್‌ರ ಜೊತೆಗೆ ಹೊರಟು ಹೋದರು.

ಅದರ ನಂತರ ಯೋಧರ ಸಂಘಗಳು ಕ್ರಮವಾಗಿ ಮದೀನಕ್ಕೆ ಬರಲು ಶುರುವಾದುವು. ಹಝ್ರತ್ ಅಬೂಬಕರ್(ರ)ರ ಬಳಿ ಇನ್ನಷ್ಟು ಜನರು ಬಂದು ಸೇರಿದರು. ಆಗ ಹಝ್ರತ್ ಮುಆವಿಯ(ರ)ರನ್ನು ಹಝ್ರತ್ ಅಬೂಬಕರ್(ರ) ಅವರ ಅಮೀರ್ ಆಗಿ ನಿಶ್ಚಯಿಸಿದರು. ಅವರೊಡನೆ ಅವರ ಸಹೋದರನಾದ ಹಝ್ರತ್ ಯಝೀದ್ ಬಿನ್ ಅಬೂಸುಫ್ಯಾನ್‌ರನ್ನು ಭೇಟಿಯಾಗಲು ಆದೇಶಿಸಿದರು. ಅವರು ಹೊರಟು ಹಝ್ರತ್ ಯಝೀದ್ ಬಿನ್ ಅಬೂಸುಫ್ಯಾನ್(ರ)ರನ್ನು ಭೇಟಿಯಾದರು. ಅನಂತರ ಹಝ್ರತ್ ಹಂಝ಼ ಬಿನ್ ಅಬೂಬಕರ್‌ಹಮ್‌ದಾನಿ ಒಂದು ಸಾವಿರದಷ್ಟು ಸೈನಿಕರನ್ನು ಒಳಗೊಂಡು ಅಥವಾ ಅದಕ್ಕಿಂತ ಹೆಚ್ಚಿನ ಸೈನಿಕರ ಜೊತೆಗೆ ಹಝ್ರತ್ ಅಬೂಬಕರ್(ರ)ರ ಸನ್ನಿಧಿಯಲ್ಲಿ ಹಾಜರಾದರು. ಅದರ ಸಂಖ್ಯೆ ಮತ್ತು ಅವರ ತಯಾರಿಯನ್ನು ನೋಡಿಕೊಂಡು ಹಝ್ರತ್ ಅಬೂಬಕರ್(ರ) ಬಹಳ ಸಂತೋಷಗೊಂಡರು ಮತ್ತು ಹೀಗೆ ಹೇಳಿದರು: ನಾವು ಮೂರು ನೇತಾರರನ್ನು ನೇಮಿಸಿದ್ದೇವೆ. ಅವರಲ್ಲಿ ಯಾರೊಡನೆ ಬೇಕಾದರೂ ನೀವು ಹೋಗಿ ಸೇರಿಕೊಳ್ಳಿರಿ. ಹಝ್ರತ್ ಅಬೂಬಕರ್(ರ) ಕಳುಹಿಸಿದ ಮೂರು ನೇತಾರರಲ್ಲಿ ಅತ್ಯಂತ ಶ್ರೇಷ್ಠ ಮತ್ತು ಹಝ್ರತ್ ಪೈಗಂಬರ್(ಸ)ರ ಜೊತೆಗಿದ್ದವರಲ್ಲಿ ಅತ್ಯುತ್ತಮ ಹಝ್ರತ್ ಅಬೂಉಬೈದ ಬಿನ್ ಜರ್ರಾಹ್(ರ) ಆಗಿರುವರು ಎಂಬುದನ್ನು ಹಝ್ರತ್ ಹಂಝ಼ ಬಿನ್ ಅಬೂಬಕರ್(ರ) ಮುಸ್ಲಿಮರಿಂದ ತಿಳಿದುಕೊಂಡರು. ಹೀಗೆ ಅವರು ಹಝ್ರತ್ ಅಬೂ ಉಬೈದ(ರ)ರ ಬಳಿಗೆ ಹೋಗಿ ಸೇರಿಕೊಂಡರು.

ಹಝ್ರತ್ ಅಬೂ ಉಬೈದ(ರ) ನಿರಂತರವಾಗಿ ಪತ್ರಗಳನ್ನು ಬರೆದ ಕಾರಣದಿಂದ ಹಝ್ರತ್ ಖಾಲಿದ್ ಬಿನ್ ವಲೀದ್(ರ)ರನ್ನು ಸಿರಿಯಗೆ ಕಳುಹಿಸಲು ತೀರ್ಮಾನಿಸಲಾಯಿತು. ಹಝ್ರತ್ ಖಾಲಿದ್(ರ) ಆ ಸಮಯದಲ್ಲಿ ಇರಾಕಿನಲ್ಲಿದ್ದರು. ಅವರೊಡನೆ ಸಿರಿಯಗೆ ಹೋಗಲು ಮತ್ತು ಅಲ್ಲಿಯ ಇಸ್ಲಾಮಿನ ಸೈನಿಕರ ನಾಯಕತ್ವವನ್ನು ವಹಿಸಿಕೊಳ್ಳಲು ಹಝ್ರತ್ ಅಬೂಬಕರ್(ರ) ನಿರ್ದೇಶನ ನೀಡಿ ಹಝ್ರತ್ ಅಬೂ ಉಬೈದ(ರ)ರಿಗೆ ಹೀಗೆ ಪತ್ರ ಬರೆದರು: ಸಿರಿಯದಲ್ಲಿ ಮುಸ್ಲಿಮರ ಯುದ್ಧದ ನೇತೃತ್ವವನ್ನು ಹಝ್ರತ್ ಖಾಲಿದ್ ಬಿನ್ ವಲೀದ್(ರ)ರಿಗೆ ನಾನು ಒಪ್ಪಿಸಿದ್ದೇನೆ. ನೀವು ಅವರನ್ನು ವಿರೋಧಿಸಬೇಡಿರಿ, ಅವರ ಮಾತನ್ನು ಆಲಿಸಿರಿ ಮತ್ತು ಅವರ ಆದೇಶವನ್ನು ಅನುಸರಿಸಿರಿ. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಮುಸ್ಲಿಮರ ಜೊತೆಗೆ ಬಸ್ರಾಗೆ ತಲುಪಿದಾಗ ಪೂರ್ತಿ ಸೈನ್ಯ ಅಲ್ಲಿ ಒಟ್ಟು ಸೇರಿತು. ಎಲ್ಲರೂ ಅಲ್ಲಿಯ ಯುದ್ಧದಲ್ಲಿ ಅವರನ್ನು ನಾಯಕನನ್ನಾಗಿ ಮಾಡಿಕೊಂಡರು. ಅವರು ಪಟ್ಟಣವನ್ನು ಸುತ್ತುವರೆದರು. ಆಗ ಅಲ್ಲಿಯ ನಿವಾಸಿಗಳು ಮುಸ್ಲಿಮರಿಗೆ

ಜಿಝ್ಯಿಯ ಕೊಡುವೆವು ಮತ್ತು ಮುಸ್ಲಿಮರು ಅವರ ಜೀವಗಳಿಗೆ, ಸಂಪತ್ತುಗಳಿಗೆ ಮತ್ತು ಮಕ್ಕಳಿಗೆ ಅಭಯ ನೀಡಬೇಕು ಎಂಬುವುದಾಗಿ ಒಪ್ಪಂದ ಮಾಡಿಕೊಂಡರು.

ಮುಂದಿನದು ಅಜ್‌ನಾದೈನ್ ಅಥವಾ ಅಜ್ನಾದೀನ್ ಯುದ್ಧವಾಗಿದೆ. ಅದರ ಬಗ್ಗೆ ಹೀಗೆ ಬರೆಯಲಾಗಿದೆ: ಬಸ್ರಾದ ವಿಜಯದ ನಂತರ ಹಝ್ರತ್ ಖಾಲಿದ್(ರ), ಹಝ್ರತ್ ಅಬೂ ಉಬೈದ(ರ), ಹಝ್ರತ್ ಶುರಹ್‌ಬೀಲ್(ರ), ಹಝ್ರತ್ ಯಝೀದ್(ರ)ರನ್ನು ಜೊತೆಗೆ ಸೇರಿಸಿಕೊಂಡು ಹಝ್ರತ್ ಅಮ್ರ್ ಬಿನ್ ಆಸ್(ರ)ರ ನೆರವಿಗಾಗಿ ಪೆಲಸ್ತೀನಿಗೆ ಹೊರಟರು. ಆ ಸಮಯದಲ್ಲಿ ಹಝ್ರತ್ ಅಮ್ರ್(ರ) ಪೆಲಸ್ತೀನಿನ ತಗ್ಗು ಪ್ರದೇಶದಲ್ಲಿ ಇದ್ದರು. ಅವರು ಸಹ ಇಸ್ಲಾಮಿನ ಸೇನೆಯೊಂದಿಗೆ ಬಂದು ಸೇರಲು ಬಯಸುತ್ತಿದ್ದರು. ಆದರೆ ರೋಮಿನ ಸೇನೆ ಅವರನ್ನು ಹಿಂಬಾಲಿಸುತ್ತಿತ್ತು ಮತ್ತು ಅವರನ್ನು ಯುದ್ಧ ಮಾಡುವಂತೆ ಮಾಡುವ ಪ್ರಯತ್ನದಲ್ಲಿತ್ತು. ಮುಸ್ಲಿಮರ ಆಗಮನದ ಬಗ್ಗೆ ರೋಮನರಿಗೆ ಸುದ್ದಿ ಮುಟ್ಟಿದಾಗ ಅವರು ಅಜ್ನಾದೀನಿನ ಕಡೆಗೆ ತಿರುಗಿದರು. ಇಸ್ಲಾಮಿನ ಸೈನ್ಯದ ಆಗಮನದ ಬಗ್ಗೆ ಹಝ್ರತ್ ಅಮ್ರ್(ರ)ರಿಗೆ ಗೊತ್ತಾದಾಗ ಅವರು ಅಲ್ಲಿಂದ ಹೊರಟು ಇಸ್ಲಾಮಿನ ಸೈನ್ಯವನ್ನು ಸೇರಿಕೊಂಡರು. ಅನಂತರ ಎಲ್ಲರೂ ಅಜ್ನಾದೀನ್ ಪ್ರದೇಶದಲ್ಲಿ ಒಟ್ಟುಸೇರಿ ರೋಮನರ ಎದುರಾಗಿ ಪಂಕ್ತಿಬದ್ಧರಾದರು. ಮುಸ್ಲಿಮರಿಗೆ ಏನಾದರೂ ಕೊಟ್ಟು ಮರಳಿ ಕಳುಹಿಸಲು ರೋಮಿನ ಸೇನಾಧಿಪತಿ ಬಯಸಿದನು. ಅದರ ಬಗ್ಗೆ ಗೊತ್ತಾದಾಗ ಹಝ್ರತ್ ಖಾಲಿದ್(ರ) ಈ ಕಾಣಿಕೆಯನ್ನು ಬಹಳ ತುಚ್ಛವಾಗಿ ಕಂಡು ತಿರಸ್ಕರಿಸಿದರು. ಹಝ್ರತ್ ಖಾಲಿದ್ ಬಿನ್ ವಲೀದ್(ರ) ಸೈನ್ಯವನ್ನು ಕ್ರಮಪಡಿಸಿಕೊಂಡರು. ಜನರ ನಡುವೆ ಇದ್ದುಕೊಂಡು ಅವರನ್ನು ಯುದ್ಧ ಮಾಡಲು ಹುರಿದುಂಬಿಸುತ್ತಾ ಹಝ್ರತ್ ಖಾಲಿದ್ ಬಿನ್ ವಲೀದ್(ರ) ನಡೆದು ಹೋಗುತ್ತಿದ್ದರು. ಒಂದೇ ಕಡೆ ನಿಲ್ಲುತ್ತಿರಲಿಲ್ಲ. ಅವರು ಜನರೊಡನೆ ಹೇಳಿದರು: ನಾನು ದಾಳಿ ನಡೆಸುವಾಗ ನೀವು ಕೂಡ ದಾಳಿ ನಡೆಸಿರಿ. ಅನಂತರ ಎರಡೂ ಸೇನೆಗಳ ನಡುವೆ ತೀವ್ರ ಯುದ್ಧ ನಡೆಯಿತು ಮತ್ತು ರೋಮನರು ಓಡುತ್ತಾ ಜೀವ ಉಳಿಸಿಕೊಂಡರು. ಮುಸ್ಲಿಮರ ನಾಯಕನನ್ನು ಮೋಸದಿಂದ ವಧಿಸಲು ವಿಫಲನಾದ ನಂತರ ರೋಮಿನ ಸೇನಾಧಿಪತಿಯಾದ ವರ್‌ದಾನ್ ಹಝ್ರತ್ ಝಿರಾರ್(ರ) ಮತ್ತು ಅವರ ಸೈನಿಕರ ಕೈಗಳಿಂದ ತನ್ನ ದುರ್ಗತಿಯನ್ನು ಕಂಡನು. ರೋಮನರಿಗೆ ಇದರ ಸುದ್ದಿ ಮುಟ್ಟಿದಾಗ ಅವರ ಜಂಗಾಬಲ ಉದುಡಿಹೋಯಿತು. ಈ ಯುದ್ಧದಲ್ಲಿ ರೋಮನರ ಸಂಖ್ಯೆ ಒಂದು ಲಕ್ಷದಷ್ಟು ಇತ್ತು. ಅದೇ ವೇಳೆ ಮುಸ್ಲಿಮರ ಸಂಖ್ಯೆ ಮೂವತ್ತು ಸಾವಿರ ಹಾಗೂ ಮತ್ತೊಂದು ವರದಿಯ ಪ್ರಕಾರ ಮೂವತ್ತೈದು ಸಾವಿರವಾಗಿತ್ತು. ಈ ಯುದ್ಧದಲ್ಲಿ ಮೂರು ಸಾವಿರ ರೋಮನರು ಕೊಲ್ಲಲ್ಪಟ್ಟರು. ಪರಾಜಿತಗೊಂಡ ಇತರ ಸೈನಿಕರಿಗೆ ವಿವಿಧ ಪಟ್ಟಣಗಳಲ್ಲಿ ಅಭಯ ಪಡೆಯಬೇಕಾಯಿತು. ಅಜ್‌ನಾದೀನಿನ ವಿಜಯದ ನಂತರ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಪತ್ರದ ಮೂಲಕ ಈ ಸುವಾರ್ತೆಯನ್ನು ಹಝ್ರತ್ ಅಬೂಬಕರ್(ರ)ರಿಗೆ ತಿಳಿಸಿದರು.

(ಅಜ್ನಾದೀನ್ ಯುದ್ಧ ಯಾವಾಗ ನಡೆಯಿತು ಎಂಬುದರ ಬಗ್ಗೆ ಇರುವ ಸಂಶಯದ ವಿವರಣೆಯನ್ನು ಹುಝೂರ್ ಕೊನೆಗೆ ಹೇಳಿದರು. ಡಮಸ್ಕಸ್ ವಿಜಯದ ಬಗ್ಗೆಗಿನ ವಿವರಣೆ – ಇನ್‌ಶಾ ಅಲ್ಲಾಹ್ ಮುಂದಿನ ಬಾರಿ ಪ್ರಸ್ತಾಪಿಸಲಾಗುವುದು ಎಂದು ಹುಝೂರ್ ಹೇಳಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ○اُذْكُرُوااللّٰهَ يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, on 26-08-2022*

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim |***Layout:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon